ಸಿಎಸ್‌ಐಆರ್ – ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ

सीएसआईआर केन्द्रीय खाद्य प्रौद्योगिक अनुसंधान संस्थान

CSIR-Central Food Technological Research Institute, Mysuru-570020

# MEDIA COVERAGE

## Celebration of International Women's Day 2026

**10.03.2026**

ಸನಾತನ ಸಂಪ್ರದಾಯದಲ್ಲಿ ಪಂಚಾಂಗ ಶ್ರವಣ ಮತ್ತು

# ಸಿಎಫ್‌ಟಿಆರ್‌ಐನಲ್ಲಿ ಮಹಿಳಾ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಸಿಎಸ್‌ಐಆರ್-ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಮುಖ್ಯ ಅತಿಥಿಯಾಗಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಡಾ.ಪಿ. ದೀಪಾ ಮಾತನಾಡಿ, ಮಹಿಳೆಯರನ್ನು ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಸಂಶೋಧನೆ ಮತ್ತು ನವೋತ್ಪಾದನೆ ಕ್ಷೇತ್ರಗಳಲ್ಲಿ ಅವಕಾಶಗಳ ಮೂಲಕ ಶಕ್ತಿಶಾಲಿಯಾಗಿಸುವ ಮಹತ್ವವನ್ನು ಒತ್ತಿ ಹೇಳಿದರು.

ಮಹಿಳೆಯರ ಆಂತರಿಕ ಶಕ್ತಿ, ವೃತ್ತಿಪರ ಜೀವನದಲ್ಲಿ ಉತ್ಕೃಷ್ಟ ಸಾಧನೆ ಮಾಡಲು ಹಾಗೂ ಮನೆಯ ಹೊಣೆಗಾರಿಕೆಗಳನ್ನು ನಿರ್ವಹಿಸಲು ಸಹಾಯಕವಾಗಿದೆ ಎಂದು ಹೇಳಿದರು.

ಬೆಂಗಳೂರಿನ ಸ್ಮೈಲ್ಸ್ ಆಸ್ಪತ್ರೆಯ ಸಿಇಒ ಮತ್ತು ಸ್ಥಾಪಕ ಡಾ.ಸಿ.ಎಂ. ಪರಮೇಶ್ವರ ಮಾತನಾಡಿ, ಮಹಿಳೆಯರ ಆರೋಗ್ಯ ಮತ್ತು ಕಲ್ಯಾಣದ ಮಹತ್ವವನ್ನು ವಿವರಿಸಿದರು. ನಿಯಮಿತ ವೈದ್ಯಕೀಯ ಪರಿಶೀಲನೆ, ಮಾನಸಿಕ ಆರೋಗ್ಯ ಮತ್ತು ಸಮತೋಲಿತ ಜೀವನಶೈಲಿ ಅನುಸರಿಸುವ ಅವಶ್ಯಕತೆಯನ್ನು ಹೇಳಿದರು. ಮಹಿಳೆಯರನ್ನು ಶಕ್ತಿಶಾಲಿಯಾಗಿಸುವುದರಲ್ಲಿ ಅವರ ಶಾರೀರಿಕ ಮತ್ತು ಭಾವನಾತ್ಮಕ ಆರೋಗ್ಯವೂ ಸೇರಿರಬೇಕು ಎಂದರು. ಭಾರತದಲ್ಲಿ ಹೆಣ್ಣುಮಕ್ಕಳ ಹತ್ಯೆಯ ಪ್ರಮಾಣದ ಬಗ್ಗೆ ಆತಂಕ ವ್ಯಕ್ತಪಡಿಸಿ, ಹೆಚ್ಚು ಜಾಗೃತಿ ಮತ್ತು ಸಾಮಾಜಿಕ ಹೊಣೆಗಾರಿಕೆಯ ಅಗತ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಮ್ ಮಾತನಾಡಿ, ಸಿಎಫ್‌ಟಿಆರ್ ಐನಲ್ಲಿ ಮಹಿಳಾ ವಿಜ್ಞಾನಿಗಳು ಮತ್ತು ಸಿಬ್ಬಂದಿ ನೀಡುತ್ತಿರುವ ಅಮೂಲ್ಯ ಕೊಡುಗೆಗಳನ್ನು ಮೆಚ್ಚಿ ಹೇಳಿದರು.

ಸಂಶೋಧನೆ ಕೇಂದ್ರವು ವಿವಿಧ ಜೀವನ ಹಂತಗಳಲ್ಲಿ (ಗರ್ಭಧಾರಣೆ ಮತ್ತು ಲ್ಯಾಕ್ಟೇಶನ್ ಸೇರಿದಂತೆ) ಮಹಿಳೆಯರ ಆರೋಗ್ಯಕ್ಕೆ ಉಪಯುಕ್ತ ಖನಿಜಗಳು ಮತ್ತು ವಿಟಮಿನ್‌ಗಳುಳ್ಳ ಸ್ವಾಭಾವಿಕ ಸಂಯೋಜನೆಗಳ ಮೇಲೆ ಸಂಶೋಧನೆ ಮಾಡಲು ಪ್ರೋತ್ಸಾಹಿಸುತ್ತಿದೆ ಎಂದು ವಿವರಿಸಿದರು. ಆಹಾರ ತಂತ್ರಜ್ಞಾನ ನವೋತ್ಪಾದನೆ ಮತ್ತು ತರಬೇತಿ ಮೂಲಕ ಯಶಸ್ವಿಯಾದ ಮಹಿಳಾ ಉದ್ಯಮಿಗಳ ಸಾಧನೆಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ವಿಜ್ಞಾನಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿ, ವೈಜ್ಞಾನಿಕ ಮತ್ತು ಸಮಾಜದಲ್ಲಿ ಮಹಿಳೆಯರ ಸಾಧನೆಗಳನ್ನು ಗುರುತಿಸಿದರು. ಮುಖ್ಯ ವಿಜ್ಞಾನಿ ಡಾ. ಪುಷ್ಪ ಎಸ್. ಮೂರ್ತಿ ಸ್ವಾಗತಿಸಿದರು. ಪ್ರಮುಖ ವಿಜ್ಞಾನಿ ಕ್ರಾಸಿನಾ ಕಾಸರ್ ವಂದಿಸಿದರು.

**Kannada Prabha (12.03.2026)**

### ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿರ್ದೇಶಕಿ ಪ್ರೊ.ಪಿ.ದೀಪಾ

# ‘ಮಹಿಳೆಯರು ಉದ್ಯಮ ಸ್ಥಾಪಿಸಲಿ’

ಪ್ರಜಾವಾಣಿ ವಾರ್ತೆ

**ಮೈಸೂರು:** ‘ಮಹಿಳೆಯರು ಆಹಾರೋದ್ಯಮ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ತೊಡಗಿಸಿಕೊಳ್ಳಬೇಕು. ನವೋದ್ಯಮಿಗಳಾಗಿ ಉದ್ಯೋಗ ಸೃಷ್ಟಿಸಬೇಕು’ ಎಂದು ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿರ್ದೇಶಕಿ ಪ್ರೊ. ಪಿ.ದೀಪಾ ಹೇಳಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ‘ಶಿಕ್ಷಣ, ಕೌಶಲಾಭಿವೃದ್ಧಿ, ಸಂಶೋಧನಾ ಕ್ಷೇತ್ರದಲ್ಲಿ ಅವಕಾಶಗಳಿದ್ದು, ಮಹಿಳೆಯರು ಉದ್ಯಮಶೀಲತೆ ಬೆಳೆಸಿಕೊಂಡು ಸಬಲೀಕರಣದತ್ತ ದಿಟ್ಟ ಹೆಜ್ಜೆಯಿಡಬೇಕು’ ಎಂದರು.

‘ಮಹಿಳೆ ಎಂದರೆ ಶಾಂತಿ, ಶಕ್ತಿ. ಮನೆಯ ಹೊಣೆಗಾರಿಕೆ ನಿಭಾಯಿಸುತ್ತಲೇ ವೃತ್ತಿಪರ ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದಾರೆ. ಮನೆಯಲ್ಲಿ ಲಯವಿದ್ದರೆ ರಾಷ್ಟ್ರವೂ ಲಯದಲ್ಲಿರುತ್ತದೆ’ ಎಂದು ಅಭಿಪ್ರಾಯಪಟ್ಟರು.




ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಿಎಸ್‌ಆರ್‌ಟಿಐ ನಿರ್ದೇಶಕಿ ಪ್ರೊ.ಪಿ.ದೀಪಾ ಉದ್ಘಾಟಿಸಿದರು. ಪುಷ್ಪಾ ಎಸ್‌.ಮೂರ್ತಿ, ಡಾ. ಸಿ.ಎಂ.ಪರಮೇಶ್ವರ, ಪ್ರೊ. ಎಂ.ಎಸ್‌.ಮೀರಾ, ಪ್ರೊ. ಗಿರಿಧರ ಪರ್ವತಂ ಪಾಲ್ಗೊಂಡಿದ್ದರು

ಸಿಎಫ್‌ಟಿಆರ್‌ಐ ನಿರ್ದೇಶಕ ಪ್ರೊ. ಗಿರಿಧರ ಪರ್ವತಂ, ‘ಸಂಸ್ಥೆಯ ಬೆಳವಣಿಗೆಯಲ್ಲಿ ಮಹಿಳಾ ವಿಜ್ಞಾನಿಗಳ ಕೊಡುಗೆ ಅಪಾರ. ಮಹಿಳೆಯರ ಆರೋಗ್ಯಕ್ಕೆ ಉಪಯುಕ್ತ ಪೌಷ್ಟಿಕಾಂಶ ಇರುವ ಉತ್ಪನ್ನಗಳನ್ನು ಸಂಶೋಧಿಸಿದೆ. ಅಲ್ಲದೇ, ಉದ್ಯಮಿ ಆಗುವ ಕನಸು ಕಂಡವರಿಗೆ ಸಂಸ್ಥೆಯು ನೆರವಾಗುತ್ತಿದೆ’ ಎಂದರು.

ಸ್ಮೈಲ್ಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎಂ.ಪರಮೇಶ್ವರ ಅವರನ್ನು ಸನ್ಮಾನಿಸಲಾಯಿತು.

ವಿಜ್ಞಾನಿಗಳಾದ ಪುಷ್ಪಾ ಎಸ್‌.ಮೂರ್ತಿ, ಕ್ರಾಸಿನಾ ಕಾಸರ್ ಪಾಲ್ಗೊಂಡಿದ್ದರು.

**Prajavani (12.03.2026)**